


ಹಣ ಕಳೆದುಕೊಳ್ಳುವುದರ ಜತೆಗೆ ಆತಂಕ, ಖಿನ್ನತೆಯನ್ನೂ ಅನುಭವಿಸುವ 'ಡಿಜಿಟಲ್ ಬಂಧನ' ಎಂಬ ಸೈಬರ್ ಅಪರಾಧವು ಹೆಮ್ಮರವಾಗಿ ಬೆಳೆದಿದೆ. ಅಪರಾಧದ ಜಾಲ ಜಗತ್ತಿನ ವಿವಿಧ ಪ್ರದೇಶಗಳಲ್ಲಿ ಬೇರು ಬಿಟ್ಟಿದೆ. ಇದನ್ನು ಬೇರು ಸಮೇತ ಕಿತ್ತು ಹಾಕಲು ಸುಪ್ರೀಂ ಕೋರ್ಟ್ ಕೂಡ ಮಧ್ಯ ಪ್ರವೇಶಿಸಿದೆ. ಇಂಥ ಕೃತ್ಯಕ್ಕೆ ಒಳಗಾಗದಿರಲು ಜಾಗೃತಿ ಮೂಡಿಸುವ ಕೆಲಸಗಳು ವ್ಯಾಪಕವಾಗಿ ನಡೆಯುತ್ತಿದ್ದರೂ ಪ್ರಕರಣಗಳು ವರದಿಯಾಗುತ್ತಲೇ ಇವೆ. ಡಿಜಿಟಲ್ ಅರೆಸ್ಟ್‌ಗೆ ಒಳಗಾದವರ ಕಥನ, ಪೊಲೀಸ್ ಅಧಿಕಾರಿಗಳ ಎಚ್ಚರಿಕೆಯ ನುಡಿಗಳನ್ನೊಳಗೊಂಡ ಲೇಖನವಿದು.

ಇ.ಎಸ್. ಸುಧೀಂದ್ರ ಪ್ರಸಾದ್



# ಡಿಜಿಟಲ್ ಅರೆಸ್ಟ್

## ವಂಚನೆಯ ಸೂತ್ರ ಭಾವನೆಯೇ ಅಸ್ತ್ರ

**7 ಮೇ 2025 ಬೆಳಿಗ್ಗೆ 11.30:**

ಅದೇ ತಾನೆ ನನ್ನ ಅಂಕಣವನ್ನು ಬರೆದು ಮುಗಿಸಿ ಪ್ರೂಫ್ ಓದುತ್ತ ಕೂತಿದ್ದೆ. ಫೋನ್ ಬಂತು. 'ನಾಗೇಶ್ ಹೆಗಡೆ, ನಿಮ್ಮ ಇನ್ನೊಂದು ನಂಬರಿನಿಂದ ಕಾನೂನು ಬಾಹಿರ ಚಟುವಟಿಕೆ ನಡೆಯುತ್ತಿವೆ, ನಿಮ್ಮನ್ನು ಎಚ್ಚರಿಸುತ್ತಿದ್ದೇವೆ ಎಂಬ ವಾರ್ನಿಂಗ್ ಬಂತು.

ಕೊಂಚ ದಿಗಿಲಾಯಿತು. ಪತ್ನಿ ರೇಖಾಳ ಫೋನ್ ಬಿಟ್ಟರೆ ನಮ್ಮ ಬಳಿ ಇನ್ನಾವ ನಂಬರೂ ಇಲ್ಲ! ಅವಳದ್ದೇನಿದ್ದರೂ ರಿಸೀವಿಂಗ್ ಅಷ್ಟೆ. ತಾನಾಗಿ ಯಾರಿಗೂ ಕಾಲ್ ಮಾಡುವುದಿಲ್ಲ. ಇವಿಷ್ಟನ್ನು ಆ ವ್ಯಕ್ತಿಗೆ ವಿವರಿಸಿದೆ. ಆತ ಹೇಳಿದ: "ನೀವು ಏಪ್ರಿಲ್ 25ರಂದು ಮುಂಬೈ ಅಂತರರಾಷ್ಟ್ರೀಯ ಏರ್‌ಪೋರ್ಟ್‌ನಲ್ಲಿ ಹೊಸ ಸಿಮ್ ಖರೀದಿಸಿದ್ದೀರಿ ನಂಬರ್ 7738954652". 'ಅರೆ! ನಾವು ಬೆಂಗಳೂರು ಬಿಟ್ಟು ಹೋಗಲೇ ಇಲ್ಲ. ನೀವು ಯಾರು?' ಎಂದು ಕೇಳಿದೆ.

'ನಾನು ನ್ಯಾಶನಲ್ ಸೈಬರ್ ಕ್ರೈಮ್ ರಿಪೋರ್ಟಿಂಗ್ ಪೋರ್ಟಲ್‌ನಿಂದ ಮಾತಾಡುತ್ತಿದ್ದೇನೆ. ನಿಮ್ಮ ವಿವರಣೆ ಏನಿದ್ದರೂ ನನ್ನ ಮೇಲಧಿಕಾರಿಗೆ ಹೇಳಿ, ಕನೆಕ್ಟ್ ಮಾಡುತ್ತೇನೆ' ಎಂದ.

